ನೋಡಿದ್ದು... ಹಾಗೆ... ಬಾಯ್ಕಳೆದುಕೊಂಡು! ಒಮ್ಮೆಯಂತೂ ಇಂವ... ಇಂವ ಅಂದ್ರೆ ಈ ದೊರೆ, ಅವಳನ್ನು ಕುದುರೆ ಮೇಲೆ ಹತ್ತಿಸಿಕೊಂಡು ಕುಡಾಲರ ಪೇಟೆಯ ತನ್ನ ಬಂಗಲೆಗೆ ಏರಿಸಿಕೊಂಡು ಹೋದವನು, ಆರು ತಿಂಗಳ ನಂತರ ತಂದು ಊರಿಗೆ ಬಿಟ್ಟಿದ್ದನಂತೆ. ಅವನಿಗೆ ಹುಟ್ಟಿದ್ದೇ ಇರಬೇಕು ನನ್ನಜ್ಜನ ಅಜ್ಜ ಇಟ್ಟುಕೊಂಡವ್ಳು; ಅಂದ್ರೆ ಅದೇ ಈ ಸೂಳೆಸಿದ್ದುವಿನ ಹಿರಿ ಮಗ್ಳು; ತೊಳೆದಿಟ್ಟ ಬಿಳಿಗೆಣಸಿನ ಬಣ್ಣವಿದ್ಲಂತೆ... ಕಣ್ಣು, ಮೂಗು, ಅದು ಇದು ರಸಿಕರಿಗೆ ಹೇಳಿ ಮಾಡಿಸಿಟ್ಟಂತೆ ಇತ್ತಂತೆ... ಹಾsss.'

'ಅಯ್ಯೋ... ಆ ಬಿಕ್ನಾಸಿಯ ಉಪಕತೆ ಸಾಯ್ಲಿ ಅತ್ಲಾಗೆ ಮಾರಾಯ್ರೆ... ನೀವು ಆ ಕೆಂಪು ದೊರೆಯ ಕತೆಯನ್ನು ನಡು ನಡುವೆ ಕಡಿಬೇಡಿ...' ಎಂದು ಪೂವ ಮರಕಾಲ ಪಟೇಲರನ್ನು ನಯವಾಗಿ ಎಚ್ಚರಿಸಿದ್ದ. ಕತೆ ಮತ್ತೆ ಮುಂದುವರಿದಿತ್ತು.

...ಆ ಸೂಳೆಸಿದ್ದುವಿನ ಮಿಂಡದೊರೆ ಆಕೆಯ ಮೋಹದ ಸೆಳೆತಕ್ಕೆ ಸಿಕ್ಕಿ ಅಷ್ಟು ಒದ್ದಾಡುತ್ತಿದ್ದಂವ... ಅಂದು ಆಕೆಯನ್ನು ನೆನಪಿಸಿಕೊಂಡವನೆ ಸೀದಾ ಕುದುರೆ ಏರಿ ಬಂದವ, ರಾತ್ರಿ ಹೊತ್ತಿಗೆ ದಡ ತಲುಪಿ, ನದಿದಡದಲ್ಲಿ ಅಬ್ಬೆಪಾರಿಯಾಗಿ ನಿಂತಿದ್ದಾನೆ! ಯಾವತ್ತೂ ಆಕೆಯ ನೆನಪಾದೊಡನೆ ಆತ ಹಗಲು ಹೊತ್ತಲ್ಲಿ ಕುದುರೆಯೇರಿ ಬರುತ್ತಿದ್ದವನು, ನದಿಸೆರಗಿನ ಅಕ್ಕ ಪಕ್ಕದ ಮರಗಳಿಗೆ ಆ ಕುದುರೆಯನ್ನು ಬಿಗಿದುಬಿಟ್ಟು... ಈ ದಡದಿಂದ ಆ ದಡಕ್ಕೆ ಹಾರುತ್ತಿದ್ದನಂತೆ. ಆವಾಗಲೆಲ್ಲ, ಆ ಯುರೋಪಿಯನ್ ದೊರೆಯ ದೊಡ್ಡ ಟೋಪಿಗೆ ಭಯ ಬೀಳುತ್ತಿದ್ದ ನದಿಸೆರಗಲ್ಲಿದ್ದ ದೋಣಿಮನೆಯವರು ಕುದುರೆಯನ್ನು ಕಣ್ಣು ರೆಪ್ಪೆಯಂತೆ ನೋಡಿಕೊಳ್ಳುತ್ತಿದ್ದರಂತೆ. ಆದರೆ ಆವತ್ತು ಮಾತ್ರ ಹಾಗಿಲ್ಲ, ಹುಣ್ಣಿಮೆಯ ರಾತ್ರಿಯದು; ಕತ್ತಲಾದರೂ ಭಯವೇನಿರಲಿಲ್ಲ. ಇಂವ ದೊರೆ ಆಚೀಚೆ ನೋಡಿದವ, ನದಿ ಕಡಪಿನ ಪಕ್ಕದಲ್ಲೇ ಇರುವ... ದೋಣಿ ಕಾಯುವವರಿಗಾಗಿ ನೆರಳಿಗೆಂದು ಹಾಕಿದ್ದ ಚಪ್ಪರವೊಂದನ್ನು ದಿಟ್ಟಿಸಿದ್ದ.

...ಆ ಚಪ್ಪರದ ಒಂದು ಕಂಬವೆಂದರೆ ಅಡಿಪುನಾರ್ ಮರ. ಇಂವ ಹಿಂದೆ ಮುಂದೆ ನೋಡದೇ ತನ್ನ ಕುದುರೆಯನ್ನು ತಂದು ಚಪ್ಪರದ ಅಡಿಪುನಾರ್ ಮರಕ್ಕೆ ಬಿಗಿದಂವ... ನದಿ ಮುಂದೆ ನಿಂತು, ಮುಂದೇನು ಮಾಡಲಿ ಎಂದು ಯೋಚಿಸುತ್ತಿದ್ದನಂತೆ. ಅಷ್ಟರಲ್ಲಿ ಆಯೆರೆಯಿಂದ(ನಮ್ಮ ದಡದ ಕಡೆಯಿಂದ) ಒಂದು ಹೆಂಗಸು ಜಲ್ಲೆ(ಹುಟ್ಟು) ಹಾಕಿಕೊಂಡು ದೋಣಿ ಬಿಟ್ಟುಕೊಂಡು ಈಚಿನ ದಡಕ್ಕೆ ಅಂದರೆ ದೊರೆ ಇದ್ದ ದಡಕ್ಕೆ ಬರುತ್ತಾ ಇರುವುದು ಆ ತಿಂಗಳಬೆಳಕಲ್ಲೇ ಆತನಿಗೆ ಕಾಣಿಸಿತಂತೆ. ಹಾಗೇ... ಆ ದೋಣಿಯನ್ನು ನೋಡುತ್ತಿದ್ದ ಇಂವನಿಗೆ ಹೋದ ಜೀವ ಬಂದಂತಾಗಿತ್ತು. ಆ ಹೆಂಗಸು ಓಡಿಸುತ್ತಿದ್ದ ದೋಣಿ ಈತನಿದ್ದೆಡೆಗೇ ಬಂದಾಗ ಈತ ಕೈ ಭಾಸೆಯಲ್ಲೇ ಆಕೆಯಲ್ಲಿ ಏನೋ ಕೇಳಿದ್ನಂತೆ, ಆ ಹೆಂಗಸು ಕೈಸನ್ನೆಯಲ್ಲೇ ಇವನನ್ನು ದೋಣಿಗೆ ಕರೆದಳಂತೆ. ಈತ ದೋಣಿ ಏರಿದೊಡನೆ ಆಕೆ ಮೌನವಾಗಿ ದೋಣಿ ಬಿಟ್ಟಳಂತೆ. ದೋಣಿ ಆ ದಡದಿಂದ ಈ ದಡಕ್ಕೆ ಬಂದು ತಲುಪಿದೊಡನೆ ಆಕೆ ಸೀದಾ ಮುಂದೆ ಅಂತೆ, ಈತ ಹಿಂದೆಯಂತೆ. ಆಕೆ ಹಾಗೆ ನಡೆದು ಬಂದವಳೇ ಸೀದಾ ಅಲ್ಲಿದ್ದ ಧೂಮಾವತಿ ದೈವಸ್ಥಾನದೊಳಗೆ ಹೊಕ್ಕಳಂತೆ! ಇಂವ ಬೆಪ್ಪಣ್ಣ... ತಿಂಗಳ ಬೆಳಕಲ್ಲಿ ತೋಯುತಿದ್ದ ಕಾಡುತೋಟಗಳನ್ನು ನೋಡುತ್ತ ಆಕೆಗೆ ಬಾಲವಾಗಿದ್ದಾನೆ, ಅಷ್ಟೆ. ಒಮ್ಮೆ ಇಂವ ಆಚೀಚೆ ನೋಡಿ... ಆಕೆಯತ್ತ ನೋಡುತ್ತಾನೆ ಆಕೆ ಇಲ್ಲ !! ಬಹುಶಃ ಆಕೆ ಒಳಗೆ... ಗುಡಿಯೊಳಗೆ ಹೊಕ್ಕಿರಬೇಕು, ಎಂದು ಒಳಹೊಕ್ಕು ನೋಡುತ್ತಾನೆ... ಅಲ್ಲಿ ದೈವದ ಮೊಗ, ಕಟ್ಟಳೆ, ಗಗ್ಗರ, ಗಂಟೆ ಮಾತ್ರ ಇದೆಯಷ್ಟೆ; ಆಕೆ ಇಲ್ಲ. ಇವನು ಪರ್ದೇಸಿ ಪರಂಗಿ ಸಿಂಗ್ಳೀಕ ನೋಡು; ನಮ್ಮ ಊರಿನ ದೈವದೇವರು ಅಂದರೆ